## ಅಂತರದ ಹೊಸ ವ್ಯಾಖ್ಯಾನ

ಮಾನವೀಯತೆಯನ್ನೇ ಮಣ್ಣುಪಾಲು ಮಾಡಿದ, ಸಾಮಾಜಿಕ ಸಂಬಂಧಗಳಲ್ಲಿ ಹಿಂದೆಂದೂ ಕಂಡು–ಕೇಳರಿಯದಂತಹ ಅಲ್ಲೋಲ–ಕಲ್ಲೋಲವನ್ನು ಉಂಟುಮಾಡಿದ ವರ್ಷ ಇದಾಗಿತ್ತು. ಕೊರೊನಾ ವೈರಾಣು ಹರಡದಂತೆ **Social Distance** ಕಾಯ್ದುಕೊಳ್ಳಬೇಕು ಎನ್ನುವ ವೈದ್ಯಕೀಯ ತಜ್ಞರ ಸಲಹೆಯನ್ನೇ ಅಕ್ಷರಶಃ ‘ಸಾಮಾಜಿಕ ಅಂತರ’ ಎಂದು ಭಾವಿಸಿದ ಜನಸಮುದಾಯ, ಸಮಾಜದಿಂದ ಎಲ್ಲ ರೀತಿಯಿಂದಲೂ ಅಂತರ ಕಾಪಾಡಿಕೊಂಡು ‘ವೈಯಕ್ತಿಕ ದ್ವೀಪ’ಗಳಾಗಿ ಮಾರ್ಪಟ್ಟಿದ್ದು ನಮ್ಮ ಕಾಲದ ದುರಂತ.

ಅಕ್ಕಪಕ್ಕದವರು ಮುಖಕೊಟ್ಟು ಮಾತನಾಡದಂತಹ, ಪ್ರತಿಯೊಬ್ಬರನ್ನೂ ಅನುಮಾನದಿಂದಲೇ ನೋಡುವಂತಹ, ಮನೆ ಬಾಗಿಲಲ್ಲೇ ಪರಿಚಿತರು ಸಿಕ್ಕರೂ ಒಳಗೆ ಆಹ್ವಾನಿಸದಂತಹ ಆ ಸನ್ನಿವೇಶಗಳು ಸಾಮಾಜಿಕ ಪಲ್ಲಟಗಳಿಗೆ ಸಾಕ್ಷ್ಯ ಒದಗಿಸುತ್ತಿದ್ದವು. ಹಬ್ಬ–ಉತ್ಸವಗಳ ಸಂದರ್ಭದಲ್ಲಿ ನೆರಹೊರೆಯವರನ್ನು ‘ಕುಂಕುಮ’ಕ್ಕೆ ಆಹ್ವಾನಿಸುತ್ತಿದ್ದ ಮಹಿಳೆಯರು, ಒಬ್ಬರನ್ನೊಬ್ಬರು ಕಂಡರೂ ಅಪರಿಚಿತರಂತೆ ಬಾಗಿಲು ಹಾಕಿಕೊಳ್ಳುವಷ್ಟು ನಮ್ಮ ಸಾಮಾಜಿಕ ಸಂಬಂಧಗಳು ಕುಸಿದುಹೋಗಿದ್ದ ದಿನಗಳು ಅವು. ಮನೆಯ ಹೊರಗಿನ ಮಾತೇಕೆ? ಮನೆಯೊಳಗೆ 3–4 ಜನ ಕೋವಿಡ್ ಪೀಡಿತರಾದರೆ ‘ನಿನ್ನಿಂದಲೇ ನಮಗೆ ಬಂದಿತು’, ‘ನಾನಲ್ಲ, ನೀನೇ ಮನೆ ಮಂದಿಗೆಲ್ಲ ವೈರಸ್ ಅಂಟಿಸಿದ್ದು’ ಎಂದೆಲ್ಲ ಜಗಳವಾಡುವ ಮಟ್ಟಕ್ಕೆ ಸಂಬಂಧಗಳನ್ನು ಅಳ್ಳಕಗೊಳಿಸಿದ ವರ್ಷವೂ ಇದಲ್ಲವೇ?

11

ಕೋವಿಡ್ ಸಾಂಕ್ರಾಮಿಕವು ಕೇವಲ ಆರೋಗ್ಯಕ್ಕೆ ಸಂಬಂಧಿಸಿದ ಮಹಾಮಾರಿಯಲ್ಲ, ಒಬ್ಬರು ಮತ್ತೊಬ್ಬರ ಬಗ್ಗೆ ಭೀತಿಪಡಲು ಆರಂಭಿಸಿದ ಸಾಮಾಜಿಕ ಮಹಾಮಾರಿಯೂ ಹೌದು. ಈ ಸಾಮಾಜಿಕ ಅವಿಶ್ವಾಸದ ಒಂದು ಅಭಿವ್ಯಕ್ತಿಯಾದ ವೈಯಕ್ತಿಕ ಅಂತರವನ್ನು ವೈದ್ಯಕೀಯ ನಿಯಮ ಎಂದೇ ಮಾಡಲಾಯಿತು. ಆದರೆ, ವಾಸ್ತವವಾಗಿ ಸಾಮಾಜಿಕ ಪ್ರಪಂಚದ ಬಗೆಗೇ ನಮಗೆ ಭಯ ಆರಂಭವಾಯಿತು. ಆಗ ನಾವು ನಮ್ಮೊಳಗೇ, ನಮ್ಮ ಕುಟುಂಬಗಳ ಒಳಗೇ, ನಮ್ಮ ಸ್ಮಾರ್ಟ್‌ಫೋನ್‌ಗಳ ಒಳಗೇ ಹುದುಗಿಕೊಂಡೆವು. ಸರ್ಕಾರವು ಹೊರಭಾಗದಿಂದ ನಮ್ಮ ಮನೆಗಳನ್ನು ಲಾಕ್‌ಡೌನ್ ಮಾಡಿದಂತೆಯೇ ನಾವು ನಮ್ಮ ಮನೆಗಳೊಳಗೆ ಅಗಳಿ ಹಾಕಿಕೊಂಡು ಬಂದಿಯಾದೆವು.

ಊರಿನಲ್ಲಿ ಯಾರೇ ಮೃತಪಟ್ಟರೂ ಅಂಥವರ ಕುಟುಂಬದ ನೋವಿನಲ್ಲಿ ಉಳಿದವರು ಭಾಗಿಯಾಗುವುದು ನಮ್ಮ ಸಮಾಜ ಬೆಳೆಸಿಕೊಂಡು ಬಂದ ಸಂಪ್ರದಾಯ. ಕೋವಿಡ್‌ನಿಂದ ಯಾರಾದರೂ ಸತ್ತರೆ ಅವರ ಕುಟುಂಬದ ನೋವಿನಲ್ಲಿ ಭಾಗಿಯಾಗುವುದಿರಲಿ, ಸತ್ತವರ ಅಂತ್ಯಸಂಸ್ಕಾರಕ್ಕೂ ಆಸ್ಪದ ನೀಡುವುದಿಲ್ಲ ಎನ್ನುವಷ್ಟು ನಮ್ಮ ಸಮಾಜ ಕಠಿಣಗೊಂಡ, ತನ್ನೊಳಗಿನ ಮಾನವೀಯತೆಯ ಸೆಲೆಯನ್ನೇ ಬತ್ತಿಸಿಕೊಂಡ ಘಟನೆಗೂ ಈ ವರ್ಷ ಸಾಕ್ಷಿಯಾಯಿತು.

ದೆಹಲಿಯ ನಿಜಾಮುದ್ದೀನ್ ಪ್ರದೇಶದಲ್ಲಿ ನಡೆದ ತಬ್ಲೀಗ್ ಸಂಘಟನೆಯ ಸಭೆಯಲ್ಲಿ ಭಾಗವಹಿಸಿದ್ದ ಕೆಲವರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿರುವುದನ್ನು ನೆಪವಾಗಿ ಬಳಸಿಕೊಂಡು, ಮುಸ್ಲಿಂ ಸಮುದಾಯವು ರೋಗ ಪ್ರಸರಣದಲ್ಲಿ ತೊಡಗಿದೆ ಎಂಬ ಹುಯಿಲೆಬ್ಬಿಸಲಾಯಿತು. ಸೋಶಿಯಲ್ ಮೀಡಿಯಾಗಳು ಸಾಮಾಜಿಕ ಸಂಬಂಧಗಳನ್ನು ಬೆಸೆಯುವ ಬದಲು, ಸುಳ್ಳು ಸುದ್ದಿಗಳ ವಾಹಕಗಳಾಗಿ ಸಂಬಂಧಗಳಿಗೆ ಹುಳಿ ಹಿಂಡುತ್ತಿರುವುದು ಢಾಳಾಗಿ ಎದ್ದು ಕಂಡಿತು. ■



ಲಾಕ್‌ಡೌನ್‌ನಿಂದಾಗಿ ಹಳ್ಳಿಯಲ್ಲಿ ಮನೆಯ ಮುಂಭಾಗದಲ್ಲಿ ನಡೆದ ಸರಳ ಮದುವೆ

12

## ಕರಗಿತು ಮದುವೆಗಳ ಬೊಜ್ಜು

ಮದುವೆ ಎನ್ನುವುದು ಎರಡು ಮನಸ್ಸುಗಳು ಹಾಗೂ ಎರಡು ಕುಟುಂಬಗಳನ್ನು ಬೆಸೆಯುವಂತಹ ಒಂದು ಖಾಸಗಿ ಕಾರ್ಯಕ್ರಮ. ಆದರೆ, ಸಾರ್ವಜನಿಕವಾಗಿ ವೈಭವದಿಂದ ಮದುವೆಯನ್ನು ನಡೆಸುವುದು ನಮ್ಮ ಸಮಾಜದಲ್ಲಿ ಬಲು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಹೀಗಾಗಿ ಬೃಹತ್ ಕಲ್ಯಾಣ ಮಂಟಪ, ಭವ್ಯ ಅಲಂಕಾರ, ವಾದ್ಯಮೇಳ, ಬಗೆ ಬಗೆಯ ಖಾದ್ಯ... ಹೀಗೆ ಮದುವೆಯ ಬದಲು ಅದು ಅಕ್ಷರಶಃ ತಿರುಪತಿ ಕಲ್ಯಾಣೋತ್ಸವವೇ ಆಗಿ ಮಾರ್ಪಡುತ್ತಿತ್ತು. ಮದುವೆ ಮಹೋತ್ಸವದಲ್ಲಿ ಎಷ್ಟು ಜನ ಪಾಲ್ಗೊಂಡಿದ್ದರು ಎಂಬುದರ ಮೇಲೆ ಆ ನಿರ್ದಿಷ್ಟ ಕುಟುಂಬದ ಸಾಮಾಜಿಕ ಸಂಬಂಧಗಳನ್ನು ಅಳೆಯಲಾಗುತ್ತಿತ್ತು. ಅಂತಹ ವೈಭವಕ್ಕೂ ಒಣ ಪ್ರತಿಷ್ಠೆಯ ಲೆಕ್ಕಾಚಾರಕ್ಕೂ ತಡೆಹಾಕಿದ ವರ್ಷ ಕೂಡ ಇದಾಗಿದೆ.

ಕೊರೊನೋತ್ತರ ಅವಧಿಯಲ್ಲಿ ಏನಾಗಿದೆ ನೋಡಿ. ಮದುವೆಯ ಆ ವೈಭವವೆಲ್ಲ ಸಂಪೂರ್ಣ ಕಾಣೆಯಾಗಿಬಿಟ್ಟಿದೆ. ಭರ್ತಿ ಮದುವೆ ಋತುವಿನಲ್ಲೇ ಲಾಕ್‌ಡೌನ್ ಜಾರಿಯಾಗಿದ್ದರಿಂದ ವಧು–ವರರ ಕುಟುಂಬಗಳ ಸದಸ್ಯರಷ್ಟೇ ಸೇರಿ ಮದುವೆ ಶಾಸ್ತ್ರ ಮುಗಿಸುವಂತಾಯಿತು. ದೊಡ್ಡ ಕಲ್ಯಾಣ ಮಂಟಪವನ್ನೇ ಹಿಡಿಯಬೇಕು, ವರನಿಗೆ ಎ.ಸಿ ರೂಮ್‌ನಲ್ಲೇ ತಂಗುವ ವ್ಯವಸ್ಥೆ ಮಾಡಬೇಕು ಎಂದು ಹಟ ಹಿಡಿದವರು ವಧುವಿನ ಕೊಟ್ಟಿಗೆ ಮನೆಯಲ್ಲೇ ಗುಟ್ಟಾಗಿ ಮದುವೆ ಮಾಡಿಕೊಂಡು ಬಂದರು.

ವಿವಾಹ ಸಮಾರಂಭಗಳಿಗೆ ಹೆಚ್ಚೆಂದರೆ 50 ಜನ ಸಾಕ್ಷಿಯಾಗಬಹುದು ಎಂದು ಸರ್ಕಾರ ಆದೇಶ ಹೊರಡಿಸಿದ್ದರಿಂದ ಮದುವೆಗಳನ್ನು ಹೀಗೂ ನಡೆಸಬಹುದೇ ಎಂದು ಮೂಗಿನ ಮೇಲೆ ಬೆರಳಿಟ್ಟುಕೊಂಡು ನೋಡುವಷ್ಟು ವಿವಾಹೋತ್ಸವಗಳು ಸರಳ ಆಚರಣೆಗಳಾಗಿ ಬದಲಾದವು. ಇಡೀ ಊರನ್ನೇ ಒಳಗೊಳ್ಳುತ್ತಿದ್ದ ಮದುವೆ ಸಮಾರಂಭಗಳು, ಕೌಟುಂಬಿಕ ಕಾರ್ಯಕ್ರಮಗಳಾಗಿ ಬದಲಾದವು. ‘...ಕುಟುಂಬದ ಮದುವೆ ಪಾರ್ಟಿ’ ಬೋರ್ಡ್ ಹೊತ್ತ ವಾಹನಗಳು ಈ ವರ್ಷ ಕಾಣಲೇ ಇಲ್ಲ. ಎಷ್ಟೋ ಕುಟುಂಬಗಳ ಹೊಲಗಳು ಅನಗತ್ಯವಾಗಿ ಮಾರಾಟ ಆಗುವುದರಿಂದ ಬಚಾವಾದವು. ಆದರೆ, ವರ್ಷಾಂತ್ಯದ ವೇಳೆಗೆ ಛತ್ರದಲ್ಲಿ ಮದುವೆಗಳು ನಡೆಯುವ ಪರಿಪಾಟ ಮತ್ತೆ ಶುರುವಾಗಿದೆಯಾದರೂ ಮೊದಲಿನ ‘ಬೊಜ್ಜು’ ಈಗಿಲ್ಲ.

ಮದುವೆಗಳು ಹೀಗೆ ಬೊಜ್ಜು ಕಳೆದುಕೊಂಡು ಸರಳಗೊಂಡ ಖುಷಿ ಒಂದೆಡೆಯಾದರೆ, ಮದುವೆ ಸಮಾರಂಭಗಳನ್ನೇ ನಂಬಿ ಬೆಳೆದಿದ್ದ ಉದ್ಯಮಗಳು, ಅದರಿಂದಲೇ ಜೀವನಾಧಾರ ಕಂಡುಕೊಂಡಿದ್ದ ಕಾರ್ಮಿಕರು ಬೀದಿಪಾಲಾಗಿದ್ದನ್ನೂ ಮರೆಯುವಂತಿಲ್ಲ. ಆಭರಣ ಹಾಗೂ ವಸ್ತ್ರ ವಿನ್ಯಾಸಕಾರರು, ಛತ್ರಗಳ ಮಾಲೀಕರು ಭಾರಿ ನಷ್ಟ ಅನುಭವಿಸಿದರು. ಅಡುಗೆ ಗುತ್ತಿಗೆದಾರರು, ಅವರ ಸಹಾಯಕರು, ಬಾಜಾ ಭಜಂತ್ರಿ ಹಾಗೂ ನಾಗಸ್ವರ ಕಲಾವಿದರ ಬದುಕು ದುಸ್ತರವಾದುದು ಸುಳ್ಳಲ್ಲ. ■